ನಡೆದುಕೊಂಡುಬಂದೇ ಸರ್ಕಲ್ ಮುಟ್ಟಿಕೊಂಡ. ಸಂಜೆ ಐದಾದರೂ ಪೂರ್ತಿ ಬೆವೆತು ಹೋಗಿದ್ದ.

ಸರ್ಕಲ್ಲಿನಲ್ಲಿ ಈ ಕಡೆಯಿಂದ ರಸ್ತೆ ದಾಟಲು ನಿಂತ ಬಶೀರನನ್ನು ಆ ಕಡೆ ಪೆಟ್ರೋಲ್ ಬಂಕಿನ ಹವಾ ಹಾಕುವ ಮಶಿನ್ ಹತ್ತಿರ ನಿಂತ ಶಿರ್ಕ್ಯ ಕೈ ಮಾಡಿ 'ಅಲ್ಲೇ ಇರು. ನಾನು ಅಲ್ಲೇ ಬರತೇನೆ. ಅಲ್ಲಿಂದಲೇ ಬಸ್ಸು ಹತ್ತಿದರಾಯಿತು' ಎಂದು ಹೇಳುತ್ತಲೇ ಬಶೀರನ ಕಡೆ ಓಡಿದ. ಸಿಗ್ನಲ್ ದಾಟಿ ಸ್ಟ್ಯಾಂಡ್ ಕಡೆ ಬರುವವರೆಗೇ ಜನರೆಲ್ಲ ಹತ್ತಿದುದರಿಂದ ಬಸ್ಸು ಪೂರ್ತಿ ತುಂಬಿತ್ತು. ಶಿರ್ಕ್ಯ ಎರಡು ಮಲ್ಲೇಶ್ವರದ ಕೆ.ಸಿ. ಜನರಲ್ ಹಾಸ್ಪಿಟಲ್ ಎಂದು ಇಪ್ಪತ್ತು ರೂಪಾಯಿ ನೋಟನ್ನು ತೆಗೆದುಕೊಟ್ಟ. ಮೋದಿ ಹಾಸ್ಪಿಟಲ್, ನವರಂಗ, ಮರಿಯಪ್ಪನ ಪಾಳ್ಯ, ಹರಿಶ್ಚಂದ್ರ ಘಾಟ್ ದಾಟಿ ಕೆ. ಸಿ. ಜನರಲ್ ಹಾಸ್ಪಿಟಲ್ ಬರುವವರೆಗೆ ಗಂಟೆ ಏಳಾಗಿತ್ತು.

ಬಸ್ಸು ಪೂರ್ತಿ ಶಿರ್ಕ್ಯ, ಬಶೀರನ ಹತ್ತಿರ 'ಜೋರಾ ಗುರು ಇವತ್ತು... ನೀನು ಸೆಂದಿಲ್ ಸರ್‌ನ ಹೇಗೆ ನಿನ್ನ ಬೆರಳಲ್ಲಿ ಕುಣಿಸ್ತೀಯೊ ಹಾಗೆ ಇವಳೂ ಇಂದು ರಾತ್ರಿ ನಿನ್ನ ಆಡಸ್ತಾಳೆ ನೋಡು... ಹುಶಾರು ಗುರು...' ಎಂದು ಜೋರಾಗಿ ದೊಡ್ಡ ಧ್ವನಿಯಲ್ಲಿ ನಗುತ್ತಾ 'ನಿಧಾನವೇ ಪ್ರಧಾನ... ಅವಸರವೇ ಅಪಘಾತಕ್ಕೆ ಕಾರಣ' ಇತ್ಯಾದಿ ಲಾರಿ ಹಿಂದಿರುವ ಸುಭಾಷಿತಗಳನ್ನೆಲ್ಲ ಹೇಳುತ್ತಾ ಬಶೀರನ ಸೊಂಟಕ್ಕೆ ಕೈ ಹಾಕಿ ಚೂಟುತ್ತಿದ್ದ.

ಮಲ್ಲೇಶ್ವರದ ಕೆ.ಸಿ. ಜನರಲ್ ಹಾಸ್ಪಿಟಲ್ ಎದುರು ಇಳಿದು ಮುಖ್ಯ ದ್ವಾರದ ಪಕ್ಕದಲ್ಲೇ ಇರುವ ಬೀಡಾ ಎಳನೀರು ಅಂಗಡಿ ಹತ್ತಿರ ಹೋಗುತ್ತಿದ್ದಂತೇ ಅವಳು ಅಲ್ಲೇ ನಿಂತು ಕಾಯುತ್ತಿದ್ದಳು. ಶಿರ್ಕ್ಯ ನೋಡಿದವನೇ 'ಹೇಳಿದ್ದೆನಲ್ಲಾ... ನಮ್ಮ ಫ್ರೆಂಡ್ ಕರ್ಕಂಡ್ ಬರ್ತಿನಿ ಅಂತ. ಇವನೇ ಬಶೀರ... ಸಾಲಿಡ್ ಇದಾನೆ... ಇವನಿಗೆಲ್ಲಾ ಗೊತ್ತು...' ಎನ್ನುತ್ತ 'ಹೊರಡೋಣವಾ' ಎಂದ. ಅಲ್ಲಿಯವರೆಗೆಲ್ಲ ಬಶೀರ ಅವಳನ್ನು ಸರಿಯಾಗೇ ನೋಡಿದ್ದ. ಅವಳು ಒಮ್ಮೆ ಸಣ್ಣಗೆ ನಕ್ಕಿದ್ದಳು. ಇವರಿಗಾಗೇ ಕಾಯುತ್ತಿದ್ದೇನೆ ಎನ್ನುವಂತೆ ಎದುರೇ ನಿಂತಿದ್ದ ಆಟೋದವನ ಹತ್ತಿರ ಶಿರ್ಕ್ಯ 'ವಿಜಯನಗರಕ್ಕೆ ಬರ್ತೀರಾ' ಎಂದು ಕೇಳಿದ. ಆತ ಒಂದೂ ಮಾತನಾಡದೇ ಮೀಟರ್ ತಿರುಗಿಸಿದ. ಮೂರೂ ಜನ ಹತ್ತಿಕೊಂಡರು. ಬಶೀರನಿಗೆ ಸ್ವಲ್ಪ ಸಲಿಗೆಯಾಗಲಿ ಎಂದು ಅವಳನ್ನು ಬದಿಗೆ ಕೂರಿಸಿ ಬಶೀರನಿಗೆ ಮಧ್ಯ ಕೂರಲು ಹೇಳಿದ. ಆರ್ಚಿಸ್ ಅಂಗಡಿಯಿಂದ ನಲವತ್ತೈದು ರೂಪಾಯಿ ಕೊಟ್ಟು ಪಮೇಲಾ ಆಂಡ್ರಸನ್, ಸಮಂತಾ ಫಾಕ್ಸ್, ದಿವ್ಯಾ ಭಾರತಿಯ ಪೋಸ್ಟರ್ ಹಾಸ್ಟೆಲ್ ಗೋಡೆಯ ಮೇಲೆಲ್ಲಾ ಅಂಟಿಸಿ ಆರಾಧಿಸುತ್ತಿದ್ದರಿಂದ ನಾಲ್ಕು ಮಾರು ಮುಂದೆ ಹೋಗಿದ್ದೇ ತುದಿಗೆ ಕುಂತಿದ್ದ ಶಿರ್ಕ್ಯ 'ಇವಳೇ ಪಮೆಲಾ... ತುಮಕೂರು ಪಮೇಲಾ' ಎಂದ. ಅದಕ್ಕೂ ಅವಳು ತಲೆಕೆಡಿಸಿಕೊಳ್ಳಲಿಲ್ಲ. ಮತ್ತು ಅವಳ ಲೋಕದಲ್ಲಿ ಪಮೇಲಾ ಎನ್ನುವವರು ಯಾರೂ ಇರದಿದ್ದರಿಂದ 'ನನ್ನ ಹೆಸರು ಪಂಕಜ ಅಷ್ಟೇ, ಪಮೇಲ ಅಲ್ಲ' ಎಂದಳು. 'ಗೊತ್ತು ಗೊತ್ತು. ಆದರೆ ನೀನು ಈ ಹೆಸರಿಟ್ಟುಕೊ. ಹಣದ ಕಟ್ಟು ಕಟ್ಟು ಎಣಿಸುತ್ತೀಯ. ಏನೂ ಕಾಳಜೀ ಮಾಡಬೇಡ. ನಾನು ಎಣಿಸಿಕೊಡತೀನಿ' ಎಂದ.

ಯಾವತ್ತೂ ನೋಡುವ, ಓದಿದ ಪ್ರತಿಮೆಗಳು ಇವತ್ತು ಕಾಣಲಿಲ್ಲ. ಬಾಯಲ್ಲಿ ಪಾನ್, ತಲೆಯಲ್ಲಿ ಹೂವು, ರಗಡು ಲಿಪ್‌ಸ್ಟಿಕ್, ಮಿರಿ ಮಿರಿ ಸೀರೆ, ವಿಪರೀತ ಬೆವರು, ಕೈಯಲ್ಲಿ ಕರ್ಚೀಫು, ಹರಿದುಹೋದ ಧ್ವನಿ, ಸುಮ್ಸುಮ್ಮನೇ ಮೈಮೇಲೆ ಹೆಗಲಮೇಲೆ ಕೈ ಹಾಕಿ ಮಾತನಾಡಿಸುವುದ್ಯಾವುದನ್ನು ನೋಡಲಿಲ್ಲ. ಆದರೆ ಪಂಕಜ ಕ್ಲೀನಾಗೇ ಡ್ರೆಸ್ ಮಾಡಿದ್ದಳು. ಕಾಲು ಒಡೆದಿತ್ತು. ರಾಶಿ ಗೆಜ್ಜೆಯ ಕಾಲು ಸರಪಳಿ, ಎತ್ತರದ ಪ್ಲಾಸ್ಟಿಕ್ ಚಪ್ಪಲ್ಲು, ಸೀರೆಯಿಂದ ಹೊರಬಿದ್ದ ಫ್ರಿಲ್ ಲಂಗ, ಚಿಕ್ಕದಾಗಿ ಬೆವರಿದ ಕಂಕಳು, ಹುಬ್ಬು, ಮೇಲಿನ ತುಟಿಯ ಕೂದಲು ತೆಗೆಸಿದ್ದಕ್ಕೆ ಸಣ್ಣ ಸಣ್ಣ ಬೆವರಿನ ಮಣಿಗಳಿದ್ದವು. ಹಣೆಯಲ್ಲಿ ಮಾತ್ರ ದೊಡ್ಡ ಕುಂಕುಮ. ಯಾವುದೋ ಲೋಕಲ್